ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

867 1454478136 23/3/21

ಕಸನಿ/01/ವಿ.ಫ//ಗಿ.ಉ.ಯೋ/ಪ್ರಾ/2020-21

ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು, ದಿನಾಂಕ: 19.03.2021

## ಕಚೇರಿ ಆದೇಶ

ವಿಷಯ : 2020-21ನೇ ಸಾಲಿನ ಗಿರಿಜನ ಉಪಯೋಜನೆಯಡಿ ಗುರುಶಿಷ್ಯ ಪರಂಪರೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 144 ಕಸಧ 2020, ಬೆಂಗಳೂರು, ದಿನಾಂಕ:13.08.2020 ಮತ್ತು ಸೇರ್ಪಡೆ ಆದೇಶ ದಿನಾಂಕ:18.09.2020.
2. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 144 ಕಸಧ 2020. ಬೆಂಗಳೂರು. ದಿನಾಂಕ:10.11.2020.
3. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 144 ಕಸಧ 2020. ಬೆಂಗಳೂರು. ದಿನಾಂಕ:03.03.2021

*****

ಪ್ರಸ್ತಾವನೆ :

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ 2020-21ನೇ ಸಾಲಿನ ವಿಶೇಷ ಘಟಕ ಕ್ರಿಯಾಯೋಜನೆ ಅನುಮೋದಿಸಲಾಗಿದೆ. ಸದರಿ ಕ್ರಿಯಾಯೋಜನೆಯಲ್ಲಿ ಗುರುಶಿಷ್ಯ ಪರಂಪರೆ ಕಾರ್ಯಕ್ರಮವನ್ನು 30 ಜಿಲ್ಲೆಗಳಲ್ಲಿ ಏರ್ಪಡಿಸಲು ಒಟ್ಟು ರೂ.30.00 ಲಕ್ಷ ಗಳಿಗೆ ಅವಕಾಶ ಮಾಡಿಕೊಳ್ಳಲಾಗಿದೆ. ಗುರುಶಿಷ್ಯ ಪರಂಪರೆ ಕಾರ್ಯಕ್ರಮವನ್ನು ಏರ್ಪಡಿಸಲು ಈಗಾಗಲೇ 30 ಜಿಲ್ಲೆಗಳಿಗೆ ಮೊದಲನೇ ಹಂತದಲ್ಲಿ ತಲಾ ರೂ.0.50ಲಕ್ಷಗಳಂತೆ ಒಟ್ಟು ರೂ.15.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಉಲ್ಲೇಖ(2)ರ ಸರ್ಕಾರದ ಮಾರ್ಗ ಸೂಚಿಯನ್ವಯ ತರಬೇತಿಯು ಆರು ತಿಂಗಳ ಅವಧಿಯದಾಗಿದ್ದು, ತರಬೇತಿಯು ಡಿಸೆಂಬರ್ ಕೊನೆಯ/ಜನವರಿ ಮೊದಲನೇ ವಾರದಲ್ಲಿ ಪ್ರಾರಂಭವಾಗಿದ್ದು, ಸದರಿ ಯೋಜನೆಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮುಕ್ತಾಯವಾಗದೇ ಇರುವುದರಿಂದ ಯೋಜನೆಯ ಅನುದಾನವನ್ನು ವ್ಯಪಗತವಾಗದಂತೆ ಸದರಿ ಯೋಜನಯನ್ನು ಪೂರ್ಣಗೊಳಿಸಲು ಅನುಕೂಲವಾಗುವಂತೆ ಜಿಲ್ಲಾ ಸಹಾಯಕ ನಿರ್ದೇಶಕರಿಗೆ ಬಿಡುಗಡೆ ಮಾಡಬೇಕಾದ ಉಳಿದ ಅನುದಾನ ರೂ.15.00ಲಕ್ಷಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ:

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಗುರುಶಿಷ್ಯ ಪರಂಪರೆ ಯೋಜನೆಯನ್ನು ಆರು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ಅವಶ್ಯವಿರುವ ಅನುದಾನವನ್ನು ಗಿರಿಜನ ಉಪಯೋಜನೆಯಡಿ **ಒಟ್ಟು ರೂ.15,00,000/-(ರೂಪಾಯಿ ಹದಿನೈದು ಲಕ್ಷ ಮಾತ್ರ)**ಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು**(ರೆಸಿಪಿಯಂಟ್ ಐಡಿ-1000193025)** ಇವರಿಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಿದೆ. ಸದರಿ ಅನುದಾನವನ್ನು ಖಜಾನೆ-2ರ ಮೂಲಕ ಅನುದಾನದ ಬಿಲ್ಲಿನ ಮೇಲೆ ಸಂಬಂಧಿತರಿಗೆ ಪಾವತಿಸಲು ಆದೇಶಿಸಿದೆ.

**ಷರತ್ತುಗಳು**

1. ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.
2. ಕರ್ನಾಟಕ ಪಾರದರ್ಶಕ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
3. ಹಣ ಬಳಕೆ ಪ್ರಮಾಣ ಪತ್ರ ಹಾಗೂ ಆಡಿಟ್ ವರದಿಯನ್ನು ಸಲ್ಲಿಸುವುದು
4. ಬಿಡುಗಡೆ ಮಾಡಿದ ಅನುದಾನವನ್ನು ಬಳಕೆ ಮಾಡುವ ಬಗ್ಗೆ ಕೇಂದ್ರ ಕಛೇರಿಯ ಮುಂದಿನ ನಿರ್ದೇಶನಕ್ಕೆ ಒಳಪಟ್ಟಿರುತ್ತದೆ.
5. ಸಮಾಜಕಲ್ಯಾಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಕಲಾವಿದರ ಹೆಸರು, ಜಾತಿಪ್ರಮಾಣಪತ್ರ, RD ಸಂಖ್ಯೆ,ಗೌರವಸಂಭಾವನೆ ವಿವರ ಅಪ್‌ಲೋಡ್ ಮಾಡುವುದು.

ಮೇಲ್ಕಂಡ ವೆಚ್ಚವನ್ನು 2020-21ನೇ ಸಾಲಿನ ಲೆಕ್ಕಶೀರ್ಷಿಕೆಯಡಿ 2205-00-796-0-01-423ರಡಿ **ಗುರುಶಿಷ್ಯ ಪರಂಪರೆ ಕಾರ್ಯಕ್ರಮಕ್ಕೆ** ಒದಗಿಸಿರುವ ರೂ.30.00 ಲಕ್ಷಗಳಲ್ಲಿ ಭರಿಸತಕ್ಕದ್ದು.

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರ ಅವಗಾಹನೆಗಾಗಿ.
2. ಜಂಟಿ ನಿರ್ದೇಶಕರು (ಅ) (ಕಾ)(ಸು.ಕ) (ಸಾ) ಕೇಂದ್ರ ಕಚೇರಿ ಇವರ ಮಾಹಿತಿಗಾಗಿ.
3. ಲೆಕ್ಕಪತ್ರಾಧಿಕಾರಿಗಳು, ಕೇಂದ್ರ ಕಚೇರಿ, ಬೆಂಗಳೂರು.
4. ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು
5. ವಿಷಯ ನಿರ್ವಾಹಕರು, ಎನ್.ಎಂ.ಸಿ. ವಿಭಾಗ, ಕೇಂದ್ರ ಕಚೇರಿ, ಬೆಂಗಳೂರು.
6. ಕಡತಕ್ಕೆ.

23/3/21